ಈ) ಸದ್ಯದಲ್ಲಿ ಯಾವುದೇ ಆಧುನೀಕರಣಗೊಳಿಸುವ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ವಿಷಯ : ಮಂಡ್ಯದಲ್ಲಿ ಕೃಷಿ ಕಾಲೇಜ್ ಸ್ಥಾಪಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೪೧೧ (೯೪೯)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯದಲ್ಲಿ ಕೃಷಿ ಕಾಲೇಜು ಸ್ಥಾಪಿಸಬೇಕೆಂಬ ಯೋಜನೆ ಹಲವು ವರ್ಷಗಳಿಂದ ಇರುವದು ನಿಜವೆ ?

ಆ) ಮೇಲ್ಕಂಡ ಕಾಲೇಜಿಗಾಗಿ ವಿ. ಸಿ. ಫಾರಂ ಪ್ರದೇಶವನ್ನು ಗುರುತಿಸಲಾಗಿದೆಯೇ ?

ಇ) ಮೇಲ್ಕಂಡ ಕಾಲೇಜನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಹೌದು

ಆ) ಹೌದು

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :– ಸಹಕಾರ ಸಂಸ್ಥೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 413 (949)

ಡಾ. ಸಂಜಪ್ಪ (ಶ್ರವಣಬೆಳಗೊಳ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಕಾರಿ ಸಂಸ್ಥೆಗಳು ಅಪನತಿ ಹೊಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಹಿಂದಿನ ಸರಕಾರ ಕಾರಣವೆಂದು ಜನ ಹೇಳುತ್ತಿರುವುದು ನಿಜವೇ ?

ಆ) ನ್ಯಾಯ ಬೆಲೆ ಅಂಗಡಿಗಳನ್ನು ಸೊಸೈಟಿಗಳಿಗೆ ಕೊಡದೇ ಪಾರ್ಟಿ ಏಜೆಂಟರಿಗೆ ಕೊಟ್ಟು ಸೊಸೈಟಿಗಳು ಹಾಳಾಗುತ್ತಿರುವುದು ನಿಜವೇ ?

ಇ) ಸಹಕಾರಿ ಆಂದೋಳನ ಸ್ಥಗಿತಗೊಂಡಿರುವುದನ್ನು ಚುರುಕುಗೊಳಿಸಲು ಸರ್ಕಾರ ಯೋಚಿಸಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕಾರ್ಯಕ್ರಮಗಳೇನು ?

ಶ್ರೀ ಕೆ. ಹೆಚ್. ಪಾಟೀಲ (ಸಹಕಾರ ಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ.

ಇ) ಸಹಕಾರಿ ಆಂದೋಳನವು ಸ್ಥಗಿತಗೊಂಡಿರುವುದಿಲ್ಲ. ಅಸ್ವಸ್ಥ ಸಹಕಾರ ಸಂಘಗಳನ್ನು ಬಲಪಡಿಸುವ ದೃಷ್ಟಿಯಿಂದ ಸಹಕಾರ ಸಂಘಗಳಿಗೆ ಪುನರ್ಚೇತನ ಹಾಗೂ ಪುನರುಜ್ಜೀವನ ಯೋಜನೆಯಡಿಯಲ್ಲಿ ಶೇರು ಬಂಡವಾಳ ಹಾಗೂ ಸಹಾಯ ಧನವನ್ನು ಮಂಜೂರ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ : ಸವಣೂರ್ ಪಟ್ಟಣದಲ್ಲಿ ಭೂಸಾರ ಸಂರಕ್ಷಣೆ ಕಛೇರಿ ತೆರೆಯುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 414 (722)

ಶ್ರೀ ಮಂಜುನಾಥ ಸಿ. ಕುನ್ನೂರ (ಹಿಗ್ಗಾಂವ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?